# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 975
ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.03.2026

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಕೋವಿಡ್ ಸಂದರ್ಭದಲ್ಲಿ ಒಟ್ಟು ಎಷ್ಟು ಜನರಿಗೆ ಸಾರಿಗೆ ಸಂಸ್ಥೆಯ ಉದ್ಯೋಗಿಗಳು ಸಾವನ್ನಪ್ಪಿದ್ದಾರೆ; (ಸಂಪೂರ್ಣ ವಿವರ ನೀಡುವುದು)</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆ/ನಿಗಮಗಳಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಒಟ್ಟು 356 ನೌಕರರು ಮೃತಪಟ್ಟಿದ್ದು, ವಿವರಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ.
<table>
<tr><th>ಕ್ರ. ಸಂಖ್ಯೆ</th><th>ನಿಗಮ/ಸಂಸ್ಥೆ</th><th>ಮೃತಪಟ್ಟ ಸಿಬ್ಬಂದಿಗಳ ಸಂಖ್ಯೆ</th></tr>
<tr><td>1</td><td>ಕ.ರಾ.ರ.ಸಾ.ನಿಗಮ</td><td>98</td></tr>
<tr><td>2</td><td>ಬೆಂ.ಮ.ಸಾ.ಸಂಸ್ಥೆ</td><td>110</td></tr>
<tr><td>3</td><td>ವಾ.ಕ.ರ.ಸಾ.ಸಂಸ್ಥೆ</td><td>81</td></tr>
<tr><td>4</td><td>ಕ.ಕ.ರ.ಸಾ.ನಿಗಮ</td><td>67</td></tr>
<tr><td colspan="2">ಒಟ್ಟು</td><td>356</td></tr>
</table>
</td></tr>
<tr><td>ಆ.</td><td>ಈ ರೀತಿ ಸಾವನ್ನಪ್ಪಿದ ಸಾರಿಗೆ ಸಂಸ್ಥೆಯ ಉದ್ಯೋಗಿಗಳಿಗೆ ಪಾವತಿಸಲು ನಿರ್ಣಯಿಸಲಾಗಿದ್ದ ಪರಿಹಾರ ಹಣದ ಮೊತ್ತವೆಷ್ಟು; ಹಾಗೂ ಪರಿಹಾರ ಹಣದ ಮೊತ್ತವನ್ನು ಈಗಾಗಲೇ ಪೂರ್ಣ ಪ್ರಮಾಣದಲ್ಲಿ ಎಲ್ಲರಿಗೂ ಪಾವತಿಸಲಾಗಿದೆಯೇ;</td><td>ಸರ್ಕಾರದ ಆದೇಶ ಸಂಖ್ಯೆ:ಆಇ:114:ವೆಚ್ಚ 11/2020 ದಿನಾಂಕ:02.05.2020 ರಲ್ಲಿ ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕರು, ಪೋಲಿಸ್ ಅಧಿಕಾರಿಗಳು/ ಸಿಬ್ಬಂದಿ, ಹೋಮ್ ಗಾರ್ಡ್‌ಗಳನ್ನು, ಪೌರರಕ್ಷಣಾ ದಳ, ಅಗ್ನಿಶಾಮಕ ದಳದ ನೌಕರರು/ ಅಧಿಕಾರಿಗಳು ಬಂದೀಖಾನೆ ಸಿಬ್ಬಂದಿಗಳು, ಪೌರಕಾರ್ಮಿಕರು/ ಸ್ಯಾನಿಟೈಸರ್ ಕೆಲಸಗಾರರು, ಅವರಿಗೆ ಸಂಬಂಧಿಸಿದ ವಾಹನಗಳ ಚಾಲಕರು/ ಲೋಡರ್ ಗಳನ್ನು ಮಾತ್ರ ಕೋವಿಡ್ ವಾರಿಯರ್ ಎಂದು ಪರಿಗಣಿಸಿ ಆದೇಶಿಸಲಾಗಿತ್ತು.</td></tr>
<tr><td>ಇ.</td><td>ಇದುವರೆಗೂ ಕೋವಿಡ್ ಸಂದರ್ಭದಲ್ಲಿ ಸಾವನ್ನಪ್ಪಿದ ಸಾರಿಗೆ ಸಂಸ್ಥೆ ಉದ್ಯೋಗಿಗಳಿಗೆ ಪರಿಹಾರದ ಹಣವನ್ನು ಪಾವತಿಸದೇ ಇದ್ದಲ್ಲಿ ಅದಕ್ಕೆ ಕಾರಣಗಳೇನು;</td><td rowspan="2">ಕರಾರಸಾ ನಿಗಮದ ಮಂಡಳಿ ಸಭೆಯ ಠರಾವು ಸಂಖ್ಯೆ:10195/443, ದಿನಾಂಕ:20.05.2020ರ ನಿರ್ಣಯದಂತೆ ದಿನಾಂಕ:19-05-2020 ರಿಂದ 31.12.2020 ರ ಅವಧಿಯಲ್ಲಿ ಮೃತಪಟ್ಟ ನೌಕರರಿಗೆ ಮಾತ್ರ ಪರಿಹಾರವನ್ನು ವಿತರಿಸಲು ಹಾಗೂ ಈ ಅವಧಿಯಲ್ಲಿ ಮೃತಪಟ್ಟವರ ಪ್ರಕರಣಗಳಿಗೆ ಸರ್ಕಾರದ ವತಿಯಿಂದ ತಲಾ ರೂ.30.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿ ದಿನಾಂಕ:01.06.2020 ರಂದು ಕ.ರಾ.ರ.ಸಾ.ನಿಗಮವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.<br><br>ಪ್ರಸ್ತಾವನೆಯ ಕುರಿತು ಸರ್ಕಾರದ ಪತ್ರ ಸಂಖ್ಯೆ:ಟಿಡಿ 08 ಟಿಸಿಬಿ 2020, ದಿನಾಂಕ:07.07.2020ರ ಪತ್ರದಲ್ಲಿ, ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ನಿಧನರಾದ ನೌಕರರ ಅವಲಂಬಿತರಿಗೆ ರೂ.30.00 ಲಕ್ಷಗಳ ಪರಿಹಾರವನ್ನು ತಮ್ಮ ಆಂತರಿಕ ಸಂಪನ್ಮೂಲದಿಂದ ಮಂಜೂರು ಮಾಡುವ ಕುರಿತು ಕರಾರಸಾ ನಿಗಮದ ಮಂಡಳಿ ಸಭೆಯಲ್ಲಿ ಮಂಡಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಲಾಗಿತ್ತು. ಆದರೆ, ಆಗಿನ ಆಡಳಿತ ಮಂಡಳಿಯು ಸಂಪನ್ಮೂಲಗಳ ಕೊರತೆಯಿಂದಾಗಿ ಯಾವುದೇ ಸ್ಪಷ್ಟವಾದ ತೀರ್ಮಾನ ತೆಗೆದುಕೊಂಡಿರುವುದಿಲ್ಲ.</td></tr>
<tr><td>ಈ.</td><td>ಯಾವ ಕಾಲಮಿತಿಯೊಳಗೆ ಎಲ್ಲಾ ಸಾರಿಗೆ ಸಂಸ್ಥೆ ಉದ್ಯೋಗಿಗಳಿಗೆ ಈಗಾಗಲೇ ಪಾವತಿಸಲು ನಿರ್ಣಯಿಸಲಾಗಿದ್ದಂತೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ಹಣದ ಮೊತ್ತವನ್ನು ಪಾವತಿಸಲಾಗುವುದು?</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | **ಆದರೆ ಸರ್ಕಾರದಿಂದ ಸೂಕ್ತ ನಿರ್ದೇಶನ ದೊರೆಯುವ ಮೊದಲೇ** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 07 ಸಿಬ್ಬಂದಿಗಳ ಮೃತಾವಲಂಬಿತರಿಗೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ 04 ಸಿಬ್ಬಂದಿಗಳ ಮೃತಾವಲಂಬಿತರಿಗೆ ತಲಾ ರೂ.30 ಲಕ್ಷಗಳಂತೆ ನಿಗಮಗಳ ಹಂತದಲ್ಲಿ ಪರಿಹಾರವನ್ನು ಪಾವತಿಸಲಾಗಿತ್ತು.<br><br>ಮುಂದುವರೆದು, **ಆರ್ಥಿಕ ಇಲಾಖೆಯು** ಆದೇಶ ಸಂಖ್ಯೆ:ಆಇ:114:ವೆಚ್ಚ 11/2020, ದಿನಾಂಕ:02.05.2020 ರಲ್ಲಿ ಸಾರಿಗೆ ನಿಗಮಗಳ ನೌಕರರನ್ನು ಕೋವಿಡ್ ವಾರಿಯರ್ ಎಂದು **ಪರಿಗಣಿಸದ ಕಾರಣ** ನಿಗಮಗಳ ಉಳಿದ ಮೃತಾವಲಂಭಿತರಿಗೆ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.<br><br>ಪ್ರಸ್ತುತ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಮೃತರಾದ ಸಿಬ್ಬಂದಿಗಳ ಅವಲಂಭಿತರಿಗೆ ಪರಿಹಾರ ಕೋರಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ :16157/2022 ರನ್ವಯ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ಅಂತಿಮ ನಿರ್ಣಯವನ್ನು ನಿರೀಕ್ಷಿಸಲಾಗಿದೆ. |

ಸಂಖ್ಯೆ: ಟಿಡಿ 36 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು